C.C.No.116/2009
PW-01
CW-02

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ., ಪಾವಗಡ ನ್ಯಾಯಾಲಯ**

**ಸಿ.ಸಿ. ಸಂಖ್ಯೆ 116/2009**

**ಪ್ರಾಸಾಃ 01**

**ಚಾಸಾಃ 02**

**ದಿನಾಂಕ 14.05.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಲ್ಲಿಕಾರ್ಜುನ |
| ತಂದೆಯ ಹೆಸರು | - | ಕೋನಪ್ಪ |
| ವಯಸ್ಸು | - | 55 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸ ಸ್ಥಳ | - | ವೆಂಕಟಮ್ಮನಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ಸಾಕ್ಷಿ ಜೆರಾಕ್ಸ್ ಮಹಜರ್ ಅನ್ನು ನೋಡಿ ಗುರುತಿಸಿರುತ್ತಾರೆ. (ಮೂಲ ಮಹಜರ್ ಸಿ ಸಿ ನಂಬರ್ **251/2007** ರಲ್ಲಿ ಇರುತ್ತವೆ.) ಸದರಿ ಮಹಜರ್ ಗೆ ಯಾವಾಗ ಎಲ್ಲಿ ಸಹಿ ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲ. ಕಡತದಲ್ಲಿ ಲಭ್ಯವಿರುವ ಮಹಜರ್ ಓದಲು ಸ್ಪಷ್ಟವಾಗಿರದ ಕಾರಣ ಗುರುತಿಸಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಬರೆದಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿದ್ದು ಅನುಮತಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

2. 26.04.2003 ರಂದು ಪೆದ್ದಣ್ಣ ಎಂಬುವವರ ಮನೆಯಲ್ಲಿ ಬಾಂಬ್ ಇರುವ ಕುರಿತು

ಪರಿಶೀಲನೆಗಾಗಿ ಪೊಲೀಸರು ಅವರ ಮನೆಗೆ ಹೋದಾಗ ನನ್ನನ್ನು ಪಂಚರಾಗಿ ಕರೆಸಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-3 ರವರು ಇದ್ದರು ಎಂದರೆ ಸರಿಯಲ್ಲ. ಚಾಸಾ-5, 6, 8, 9, 13 ಮತ್ತು 14 ರವರು ನಮ್ಮ ಸಮಕ್ಷಮದಲ್ಲಿ ಪೆದ್ದಣ್ಣನವರ ಮನೆಯ ಒಳಗೆ ಹೋಗಿ ಪರಿಶೀಲಿಸಿದಾಗ ಒಂದು ಗೋಣಿ ಚೀಲದಲ್ಲಿ ಎರಡು ಡಬ್ಬಿಯಲ್ಲಿ ನಾಡಹತ್ತಿ ಬಾಂಬ್ ಗಳು ಪತ್ತೆಯಾಗಿರುತ್ತದೆಂದರೆ ಸರಿಯಲ್ಲ. ನಂತರ ನಿಪಿ-1 ನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಂತರ ನಿಪಿ1 ನ್ನು ನಮ್ಮ ಸಮಕ್ಷಮ ಜರುಗಿಸಿ ನನ್ನ ಸಹಿ ಪಡೆದು ಕೊಂಡಿರುತ್ತಾರೆಂದರೆ ಸರಿಯಲ್ಲ. ಬಾಂಬ್ ಗಳನ್ನು ನಮ್ಮ ಸಮಕ್ಷಮಯದಲ್ಲಿ ಎಫ್ ಎಸ್ ಎನ್ ಗೆ ಕಳುಹಿಸಿಕೊಡಲು ಪ್ಯಾಕ್ ಮಾಡಿರುತ್ತಾರೆಂದರೆ ಸರಿಯಲ್ಲ. ಪಂಚನಾಮೆಯನ್ನು 12 ರಿಂದ 1 ಗಂಟೆಯವರೆಗೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿಗಳು ನಮ್ಮ ಊರಿನವರಾಗಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು.)

ಓ . ಹೇ. ಕೇ. ಸರಿ ಇದೆ.

**Sd/-**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ

C.C.No.116/2009
PW-01
CW-02